**ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಸಾಗರ.**

**ಸಿ.ಸಿ. ನಂ. 1233/2023.**

**ಫಿರ್ಯಾದಿಃ-** ವಿರುದ್ಧ **ಆರೋಪಿಃ-**

| ಫಿರ್ಯಾದಿಃ- | ಆರೋಪಿಃ- |
| --- | --- |
| ಯಲ್ಲಪ್ಪ ಬಿನ್ ಬಂಗಾರಪ್ಪ,<br>ವಯಸ್ಸು ಸುಮಾರು 45 ವರ್ಷ,<br>ವಾಸಃ ಹುಲ್ಲತ್ತಿ, ಸಂಗಳ ಗ್ರಾಮ,<br>ಸಾಗರ ತಾಲ್ಲೂಕು,<br>ಶಿವಮೊಗ್ಗ ಜಿಲ್ಲೆ. | ಈರಾಪುರ ರವಿ ಬಿನ್ ಮಂಜಪ್ಪ,<br>ವಯಸ್ಸು ಸುಮಾರು 35 ವರ್ಷ,<br>ವಾಸಃ ಬೇಳೂರು ಗ್ರಾಮ ಮತ್ತು<br>ಅಂಚೆ, ಸಾಗರ ತಾಲ್ಲೂಕು,<br>ಶಿವಮೊಗ್ಗ. |

## ಆಪಾದನೆ

ಆರೋಪಿಯಾದ ನೀವು ಪಿರ್ಯಾದುದಾರರು ಪರಿಚಯಸ್ಥರಾಗಿದ್ದು, ನೀವು ಪಿರ್ಯಾದುದಾರರಿಂದ ದಿನಾಂಕಃ 24.05.2023 ರಂದು ರೂ. 2,60,000/- ಗಳನ್ನು ನಿಮ್ಮ ಗೃಹಕೃತ್ಯದ ಅಡಚಣೆ ನಿವಾರಿಸುವ ಸಲುವಾಗಿ ಕೈಗಡ ಸಾಲವಾಗಿ ಪಡೆದಿದ್ದು, ಸದರಿ ಹಣವನ್ನು ಎರಡು ತಿಂಗಳ ಒಳಗಾಗಿ ಮರುಪಾವತಿ ಮಾಡುವುದಾಗಿ ತಿಳಿಸಿರುತ್ತೀರಿ. ಆದರೆ, ನೀವು ಸಕಾಲದಲ್ಲಿ ಹಣವನ್ನು ಮರುಪಾವತಿಸಿರುವುದಿಲ್ಲ. ನಂತರ, ಪಿರ್ಯಾದುದಾರರು ಸಾಲವನ್ನು ಮರುಪಾವತಿಸುವಂತೆ ಪದೇ ಪದೇ ನಿಮ್ಮನ್ನು ಕೇಳಿಕೊಂಡಾಗ ನೀವು ದಿನಾಂಕಃ 03.08.2023 ರಂದು ಪಿರ್ಯಾದುದಾರರನ್ನು ಭೇಟಿ ಮಾಡಿ, ನಿಮ್ಮ ಖಾತೆ ಇರುವ ಕೆನರಾ ಬ್ಯಾಂಕ್, ಕೆಳದಿ ಶಾಖೆಯ ಚೆಕ್ ಸಂಖ್ಯೆ. 094771 ರ ಮೇಲೆ ರೂ. 2,60,000/- ಹಾಗೂ ದಿನಾಂಕಃ 04.08.2023 ನ್ನು ನಮೂದಿಸಿ, ಪಿರ್ಯಾದುದಾರರಿಗೆ ನಗಧಿಕರಿಸಲು ನೀಡಿರುತ್ತೀರಿ.

ನಂತರ, ಫಿರ್ಯಾದುದಾರರು ತಮ್ಮ ಖಾತೆ ಇರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಭೀಮನೇರಿ ಶಾಖೆಗೆ ನೀವು ನೀಡಿದ ಚೆಕ್ಕನ್ನು ದಿನಾಂಕಃ 05.08.2023 ರಂದು ಸಲ್ಲಿಸಿದಾಗ, 'ಫಂಡ್ ಇನ್ ಸಫಿಶಿಯಂಟ್' ಎಂಬ ಹಿಂಬರಹದೊಂದಿಗೆ ದಿನಾಂಕಃ 07.08.2023 ರಂದು ವಾಪಾಸ್ಸು ಬಂದಿರುತ್ತದೆ. ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂಬ ವಿಚಾರ ಪಿರ್ಯಾದುದಾರರಿಗೆ ತಿಳಿದ ನಂತರ, ದಿನಾಂಕಃ 24.08.2023 ರಂದು ವಕೀಲರ

ಮೂಲಕ ಸಾಲ ಮರುಪಾವತಿಸುವಂತೆ ನೋಟಿಸನ್ನು ನೋಂದಾಯಿತ ಅಂಚೆ ಮೂಲಕ ಕಳುಹಿಸಿದ್ದು, ಸದರಿ ನೋಟೀಸು ದಿನಾಂಕಃ 24.08.2023 ರಂದು ನಿಮಗೆ ಮಾಹಿತಿ ಜಾರಿಯಾಗಿದ್ದು, ಸದರಿ ನೋಟಿಸ್ ತೆಗೆದುಕೊಳ್ಳದೆ ದಿನಾಂಕಃ 06.09.2023 ರಂದು ವಾಪಾಸ್ ಬಂದಿರುತ್ತದೆ. ಆದರು ಸಹ ನೀವು ಸಾಲವನ್ನು ಮರುಪಾವತಿಸದೇ, ಫಿರ್ಯಾದುದಾರರಿಗೆ ಮೋಸ, ವಂಚನೆ ಮಾಡಬೇಕೆಂಬ ಉದ್ದೇಶದಿಂದ ಚೆಕ್ಕು ನೀಡಿ, ಆ ಮೂಲಕ ನೀವು, ಎನ್. ಐ. ಆಕ್ಟ್ ಕಲಂ 138 ರಡಿಯಲ್ಲಿ ಅಪರಾಧವೆಸಗಿರುತ್ತೀರಿ ಎಂದು ಈ ಮೂಲಕ ಆಪಾದಿಸಲಾಗಿದ್ದು, ಅದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

(ಆಪಾದನೆಯನ್ನು ದಿನಾಂಕಃ 09.04.2025 ರಂದು ತೆರೆದ ನ್ಯಾಯಾಲಯದಲ್ಲಿ ಮಾಡಲಾಗಿದೆ.)

**(ಚಾಂದಿನಿ ಜಿ.ಯು.)**
**ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಸಾಗರ.**

**ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯದಲ್ಲಿ ಸಾಗರ.**

# ಸಿ.ಸಿ. ನಂ. 1233/2023

**ಆರೋಪಿಯ ಹೇಳಿಕೆ**

ಆರೋಪಿಯ ಹೆಸರುಃ ಈರಾಪುರ ರವಿ ಬಿನ್ ಮಂಜಪ್ಪ.

ಪ್ರಶ್ನೆ. 1. ನಿಮಗೆ ಈ ಪ್ರಕರಣದಲ್ಲಿ ಮಾಡಿರುವ ಆಪಾದನೆ ಅಂಶಗಳನ್ನು ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಲಾಗಿ ಮನವರಿಕೆಯಾಯಿತೇ?
ಉತ್ತರಃ-

ಪ್ರಶ್ನೆ. 2. ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ?
ಉತ್ತರಃ-

(ದಿಃ 09.04.2025 ರಂದು ಆರೋಪಿಯಿಂದ ನೀಡಲ್ಪಟ್ಟಿದೆ ಎಂದು ಪ್ರಮಾಣಿಕರಿಸಿದೆ).

**(ಚಾಂದಿನಿ ಜಿ.ಯು.)**
**ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಸಾಗರ.**